
# ಬ್ರಹ್ಮ ಗಂಟು



ಪಾರ್ವತಿ ರಾಮನ್
ಕಲೆ: ಸಂತೋಷ್ ಸಸಿಹಿತ್ಲು

ನಮ್ಮಮ್ಮನಿಗೆ ಅವರಮ್ಮ ಹೇಳಿದ ಕಥೆ. ಹಾಗಾಗಿ ತಲೆತಲಾಂತರದಿಂದ ಹೇಳಿಕೊಂಡು ಬಂದ ಒಂದು ಕಥೆ.

ಒಂದೂರಲ್ಲಿ ಒಬ್ಬ ರಾಜನಿದ್ದ. ಅವನಿಗೆ ಮದುವೆ ವಯಸ್ಸಿಗೆ ಬಂದ ಒಬ್ಬ ಸುಂದರವಾದ ಮಗಳಿದ್ದಳು. ರಾಜನಿಗೆ ಒಬ್ಬ ರಾಜಕುಮಾರನನ್ನು ಹುಡುಕಿ ಮದುವೆ ಮಾಡುವ ಮನಸ್ಸಾಯಿತು. ಹತ್ತಿರದ ಊರುಗಳ ರಾಜಕುಮಾರರ ಫೋಟೊಗಳನ್ನೆಲ್ಲ ತರಿಸಿ ಮಗಳಿಗೆ ತೋರಿಸಿ ಅವರಲ್ಲಿ ಯಾರನ್ನಾದರೂ ವರಿಸು ಅಂತ ಹೇಳಿದನು. ರಾಜಕುಮಾರಿಯು ಸುಂದರಳೂ ಹಾಗೂ ರಾಜನ ಮಗಳೂ ಆಗಿರುವುದರಿಂದ ಸ್ವಲ್ಪ ಜಂಬ ಉಳ್ಳವಳಾಗಿದ್ದಳು. ಇದರಿಂದ ಯಾವ ಹುಡುಗರ ಫೋಟೊ ಬಂದರೂ ಏನಾದರೂ ಕೊಂಕು ತೆಗೆದು ಒಪ್ಪುತ್ತಲೇ ಇರಲಿಲ್ಲ. ಹೀಗೆ ಸುಮಾರು ದಿನಗಳು ಸರಿದವು. ರಾಜನೂ ಸಾಕಷ್ಟು ಅಕ್ಕ ಪಕ್ಕದ ರಾಜಕುಮಾರರ ಫೋಟೊಗಳನ್ನೆಲ್ಲ ತೋರಿಸಿ ಸೋತು ಹೋಗಿದ್ದನು. ಕೊನೆಗೆ ಏನೂ ತೋಚದೆ ನೀನೇ ಯಾರನ್ನಾದರೂ ಹುಡುಕಿಕೊಂಡು ಬಾ ಅಂತ ಹೇಳಿದನು. ಸರಿ, ಎಂದು ಆಕೆಯು ಒಪ್ಪಿದಳು. ಆಗ ರಾಜನು ಮಗಳ ಜೊತೆ ಕೆಲ ಸೈನಿಕರನ್ನು ಕಳಿಸಿದನು. ದಾರಿಯಲ್ಲಿ ತೊಂದರೆ ಆದರೆ ಅಂತ ತರುಣರೂ, ಶೂರರೂ ಮತ್ತು ಕಟ್ಟುಮಸ್ತಾದ ಸೈನಿಕರನ್ನೇ ಜೊತೆ ಮಾಡಿ ಕಳಿಸಿದನು. ಹೀಗೆ ಕಾಡುದಾರಿಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ ರಾಜಕುಮಾರಿಗೆ ಬಾಯಾರಿಕೆ ಆಯಿತು. ಒಬ್ಬ ಸೈನಿಕನನ್ನು ಕರೆದು ಹತ್ತಿರದಲ್ಲಿ ಎಲ್ಲಿಯಾದರೂ ನೀರು ಸಿಕ್ಕರೆ ತರುವಂತೆ ಹೇಳಿಕಳುಹಿಸಿದಳು. ಅಲ್ಲಿಯೇ ಒಂದು ಮರದ ಕೆಳಗೆ ಕುಳಿತು ಸುಧಾರಿಸಿಕೊಳ್ಳುತ್ತ ಸೈನಿಕನ ದಾರಿ ನೋಡತೊಡಗಿದಳು. ಇತ್ತ ನೀರಿಗಾಗಿ ಹೋದ ಸೈನಿಕನು ಅಲ್ಲೇ ಹತ್ತಿರದಲ್ಲಿ ಒಂದು ಕೊಳವನ್ನು ನೋಡಿ ನೀರು ತರಲು ಹೋದನು. ನೀರು ತುಂಬಿಕೊಳ್ಳುತ್ತಿರುವಾಗ ಅಲ್ಲೇ ಕೊಳದ ಮೆಟ್ಟಿಲ ಮೇಲೆ ಒಬ್ಬ ಸಾಧು ಕುಳಿತಿದ್ದ. ತಮ್ಮ ಕೈಯಲ್ಲಿ ಹಿಡಿದಿದ್ದ ದಾರದಲ್ಲಿ ಏನೋ ಗಂಟುಗಳನ್ನು ಹಾಕಿ ಬಿಡಿಸಿ ತನ್ನಷ್ಟಕ್ಕೆ ಮಂತ್ರಗಳನ್ನು ಹೇಳಿಕೊಳ್ಳುತ್ತಿದ್ದರು. ಸೈನಿಕ ಅದನ್ನು ನೋಡುತ್ತಾ ನಿಂತುಬಿಟ್ಟ. ನೀರು ತುಂಬುವುದನ್ನು ಬಿಟ್ಟು ಅವನ ಬಳಿ ಹೋಗಿ ನಿಂತು ಸ್ವಾಮಿಗಳೇ ನೀವು ಏನು ಮಾಡುತ್ತಿರುವಿರಿ. ಇದೇನು ಗಂಟು ಅಂತ ವಿಚಾರಿಸಿದನು. ಇವನ ಪ್ರಶ್ನೆಗೆ ಆ ಸಾಧು, ಇದು ‘ಬ್ರಹ್ಮಗಂಟು’ ಮರಿ ಅಂತ ಹೇಳಿದರು. ಅದು ಯಾಕೆ ಹಾಗೆ ಮಾಡುತ್ತಿರುವಿರಿ. ಅದರಿಂದೇನು ಉಪಯೋಗ ಆಗುತ್ತದೆ ಅಂತ ಕೇಳಿದ. ಆಗ ಆ ಸಾಧು ಇದರಿಂದ ಯಾವ ಗಂಡಿಗೆ ಯಾವ ಹೆಣ್ಣು, ಯಾವ ಹೆಣ್ಣಿಗೆ ಯಾವ ಗಂಡು ಅಂತ ತಿಳಿಯುತ್ತದೆ ಎಂದು ಹೇಳಿದರು. ತಕ್ಷಣ ಸೈನಿಕ ಬಹಳ ಖುಷಿಯಿಂದ ಹೌದಾ? ಹಾಗಿದ್ದರೆ ನಮ್ಮ ರಾಜಕುಮಾರಿ ಇದ್ದಾರಲ್ಲ ಅವರಿಗೆ ಯಾವ ಗಂಡು ಸಿಗಬಹುದು ಅಂತ ನೋಡಿ ತಿಳಿಸುತ್ತೀರಾ ಅಂತ ಕೇಳಿದನು. ಆಗಲಿ ಅದಕ್ಕೇನು, ತಿಳಿಸುತ್ತೇನೆ ಎಂದು ಹೇಳಿ ಒಂದು ನಿಮಿಷ ಅವನನ್ನೇ ದಿಟ್ಟಿಸಿ ನೋಡಿದರು. ನಂತರ ನಿಧಾನವಾಗಿ ನೀನೇ ಆ ಗಂಡು, ರಾಜಕುಮಾರಿಯು ನಿನ್ನನ್ನೇ ಮದುವೆ ಆಗುವುದು ಎಂದುಬಿಟ್ಟರು. ಇದನ್ನು ಕೇಳಿದ ಸೈನಿಕ ಮನಸ್ಸಿನಲ್ಲಿ ‘ಏ ಇವರಿಗೇಲ್ಲೋ ಬುದ್ಧಿ ಇಲ್ಲ ‘ನಾನೆಲ್ಲಿ, ನಮ್ಮ ರಾಜಕುಮಾರಿ ಎಲ್ಲಿ’ ಅದು ಹೇಗೆ ಸಾಧ್ಯ ಎಂತೆಂಥ ರಾಜಕುಮಾರರನ್ನೇ ಅವರು ಒಪ್ಪಿಲ್ಲ. ನನಗ್ಯಾಕೆ ಬೇಕು ಇದೆಲ್ಲ ಉಸಾಬರಿ ಅಂತ ಸುಮ್ಮನೆ ನೀರು ತಂದು ರಾಜಕುಮಾರಿಗೆ ಕೊಟ್ಟನು. ಆಗ ರಾಜಕುಮಾರಿಯು ಯಾಕೆ ಇಷ್ಟು ಲೇಟಾಗಿ ಬಂದೆ ಎಂದು ವಿಚಾರಿಸಿದಳು.

ವಿಧಿಯಿಲ್ಲದೇ ಸೈನಿಕನು ಅಲ್ಲಿ ನಡೆದದ್ದನ್ನೆಲ್ಲ